ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ದಿನವಿದ್ದ ಪರಿಸ್ಥಿತಿ ಇಂದೂ ಮುಂದುವರೆದಿದೆ. ಆಡಳಿತ ಪಕ್ಷದ ಕಡೆ ಮಂತ್ರಿಗಳಿಲ್ಲ, ಶಾಸಕರುಗಳಿಲ್ಲ.

ಅಧ್ಯಕ್ಷರು : ನಿನ್ನೆಗಿಂತಲೂ ಇವತ್ತಿನ ಪರಿಸ್ಥಿತಿ ಪರವಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಆಡಳಿತ ಪಕ್ಷದ ಪರಿಸ್ಥಿತಿ ಬಹಳ ಗಂಭೀರವಾಗಿದೆ. ಪರಿಸ್ಥಿತಿ ಹೀಗೇಕೆ ಎಂಬುದು ಅರ್ಥವಾಗುತ್ತಿಲ್ಲ. ತಾವು ನಿನ್ನೆಯೇ ಸೂಚನೆ ಕೊಟ್ಟಿದ್ದರೂ ಸದನದಲ್ಲಿ ಈಗ ಮೂರು ಜನ ಮಂತ್ರಿಗಳು ಮಾತ್ರ ಇದ್ದಾರೆ.

(ಗೊಂದಲ)

ಅಧ್ಯಕ್ಷರು : ಎಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು. ಒಬ್ಬೊಬ್ಬರೇ ಮಾತನಾಡಬೇಕು. ಈಗ ಮಾನ್ಯ ಮಂತ್ರಿಗಳು ಮಾತನಾಡುತ್ತಾರೆ.

ಶ್ರೀ ಆರ್.ವಿ.ದೇಶಪಾಂಡೆ : ಸದನದಲ್ಲಿ ಇಂತಹ ಲೋಪಗಳಾಗಬಾರದು ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಈ ಸಂಬಂಧ ಎಲ್ಲಾ ಮಾನ್ಯ ಸಚಿವರುಗಳಿಗೂ ಸೂಚನೆ ಕೊಡುತ್ತೇವೆ. ಆಡಳಿತ ಮತ್ತು ವಿರೋಧ ಪಕ್ಷದ ಎರಡೂ ಕಡೆಯ ಶಾಸಕರುಗಳು ಸದನಕ್ಕೆ ಬರಬೇಕು. ನಾವು ನಮ್ಮ ಪಕ್ಷದ ಶಾಸಕರುಗಳಿಗೆ ಹೇಳುತ್ತೇವೆ. ಅದೇ ರೀತಿ ನೀವು ತಮ್ಮ ಪಕ್ಷದ ಶಾಸಕರುಗಳಿಗೂ ಸದನಕ್ಕೆ ಹಾಜರಾಗುವಂತೆ ಸೂಚನೆ ಕೊಡಬೇಕು. ಆದುದರಿಂದ, ಕಲಾಪ ನಡೆಸಲು ತಾವೆಲ್ಲರೂ ದಯಮಾಡಿ ಸಹಕರಿಸಬೇಕು.

ಅಧ್ಯಕ್ಷರು : ಆಯಿತು.

ಶ್ರೀ ಜಗದೀಶ್ ಶೆಟ್ಟರ್ : ನಿನ್ನೆ ಮಾನ್ಯ ಸಚಿವರಾದ ಜಯಚಂದ್ರರವರು ಇದೇ ಮಾತನ್ನು ಹೇಳಿದರು. ಇವತ್ತು ನೀವು ಅದನ್ನೇ ಹೇಳುತ್ತಿದ್ದೀರಿ. ಆಡಳಿತ ಪಕ್ಷದ ಪರಿಸ್ಥಿತಿ ಬಹಳ ಗಂಭಿರವಾಗಿದೆ.

Mr.SPEAKER : Ok. Take note of it.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಾವು ಇದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

ಅಧ್ಯಕ್ಷರು : ಖಂಡಿತ. ತಾವು ನೀಡಿದ ಸಲಹೆ ಅರ್ಥಪೂರ್ಣವಾಗಿದ್ದು, ಮಾನ್ಯ ಸಚಿವರು ಅದನ್ನು ಗಂಭೀರವಾಗಿ ಪರಿಶೀಲಿಸುತ್ತಾರೆ.

(ಗೊಂದಲ)

ಅಧ್ಯಕ್ಷರು : ನಾನು ನಿಮ್ಮೊಂದಿಗಿದ್ದೇನೆ. ನಿಮ್ಮ ಅಭಿಪ್ರಾಯ ಮತ್ತು ನನ್ನ ಅಭಿಪ್ರಾಯ ಒಂದೇ ಆಗಿದ್ದು, ಅದನ್ನೇ ಮಾನ್ಯ ಸಚಿವರಿಗೆ ಒಪ್ಪಿಸುತ್ತಿದ್ದೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಅಲ್ಲಿಯ ತನಕ ಸದನವನ್ನು ಮುಂದೂಡಬೇಕು.

(ಗೊಂದಲ)

ಅಧ್ಯಕ್ಷರು : ತಾವು ಸೂಕ್ಷ್ಮವಾಗಿ ಹೇಳಿದ್ದೀರಿ, ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ಸದನವನ್ನು ಮುಂದೂಡಬೇಕು. ಈ ಸಂಬಂಧ ಅವರಿಗೆ ಒಂದು ಎಚ್ಚರಿಕೆ ಕೊಡಬೇಕು.

ಅಧ್ಯಕ್ಷರು : ಅದೆಲ್ಲಾ ಬೇಡ. ಈಗ ಸಂತಾಪ ಸೂಚನೆ.

1. ಸಂತಾಪ ಸೂಚನಾ ನಿರ್ಣಯ

ವಿಷಯ : ಮಾಜಿ ಸಚಿವರಾದ ಶ್ರೀ ಎನ್. ಚಿಕ್ಕೇಗೌಡರು ನಿಧನ ಹೊಂದಿರುವ ಬಗ್ಗೆ.

ಅಧ್ಯಕ್ಷರು : ರಾಜ್ಯದ ಮಾಜಿ ಸಚಿವರಾಗಿದ್ದ **ಎನ್.ಚಿಕ್ಕೇಗೌಡ** ಅವರು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದಿಂದ ತಿಳಿಸಬಯಸುತ್ತೇನೆ.

ಎನ್.ಚಿಕ್ಕೇಗೌಡ ಅವರು ದಿನಾಂಕ 13ನೇ ಜೂನ್ 1926ರಂದು ಹೊಸಕೋಟೆ ತಾಲ್ಲೂಕು ದೊಡ್ಡಗಟ್ಟಿಗನಬ್ಬೆ ಹಳ್ಳಿಯಲ್ಲಿ ಜನಿಸಿರುತ್ತಾರೆ. ದಿವಂಗತರು ಕೃಷಿ ಪದವೀಧರರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಎನ್.ಚಿಕ್ಕೇಗೌಡ ಅವರು ಕೃಷಿ ಮಹಾ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷರಾಗಿ ಮೈಸೂರು ರಾಜ್ಯದ ಯುವ ರೈತರ ಸಂಘಟನೆಯ ಕಾರ್ಯದರ್ಶಿಯಾಗಿ, ತಾಲ್ಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಬೆಂಗಳೂರು ಹಾಲು ಉತ್ಪಾದಕರ ಸಹಕಾರ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುತ್ತಾರೆ.

ದಿವಂಗತರು 4, 5, 7 ಮತ್ತು 9ನೇ ವಿಧಾನಸಭೆಗೆ ಹೊಸಕೋಟೆ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಗೊಂಡು ಸೇವೆ ಸಲ್ಲಿಸಿರುತ್ತಾರೆ. ಅಲ್ಲದೆ, 1972ರಲ್ಲಿ ಪಶು ಸಂಗೋಪನಾ ರಾಜ್ಯ ಸಚಿವರಾಗಿ ಮತ್ತು 1973ರಿಂದ 1977ರವರೆಗೆ ಹಾಗೂ 1991ರಿಂದ 1992ರವರೆಗೆ ಕೃಷಿ ಹಾಗೂ ಪಶು ಸಂಗೋಪನಾ ಸಚಿವರಾಗಿ ಕಾರ್ಯ ನಿರ್ವಹಿಸಿರುತ್ತಾರೆ.